ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾಹಿತಿ ತಂತ್ರಜ್ಞಾನ ಸಲಹೆಗಾರರು, ಎನ್. ಆರ್ ವೃತ್ತ, ಕೇಂದ್ರ ಕಛೇರಿ, ಬೆಂಗಳೂರು–560002

ಬಿ.ಬಿ.ಎಂ.ಪಿ/ಎಸ್‌ವೈಎಸ್/ಪಿ.ಆರ್/20/11–12 ದಿನಾಂಕ: 09–10–2014

## ಕಛೇರಿ ಆದೇಶ

| |
|---|
| ವಲಯ ಮುಖ್ಯ ಅಭಿಯಂತರರು / ಅಧೀಕ್ಷಕ ಅಭಿಯಂತರರು / ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರು |

**ವಿಷಯ:** ಜಿ.ಐ.ಎಸ್ ಆಧಾರಿತ Road Work History, OFC ಮತ್ತು Road Cutting ಪದ್ಧತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪರಿಣಾಮಕಾರಿಯಾಗಿ ಅಳವಡಿಸುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಆಯುಕ್ತರ ಕಛೇರಿಯ ಸಂಖ್ಯೆ: ಪಿ.ಎಸ್.ಆರ.(ಜಿ)/1568/12–13 ದಿನಾಂಕ: 06–02–2013

2. ಪೂಜ್ಯ ಮಹಾಪೌರರು ಹಾಗೂ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದಿರುವ ಸಭೆ ದಿನಾಂಕ: 08–09–2014

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಪೂಜ್ಯ ಮಹಾಪೌರರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾನ್ಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು (ಯೋಜನೆ) ರವರು ಭಾಗವಹಿಸಿ "Development of GIS based Enterprise Class Work Flow and Monitoring Sytems for BBMP" ತಂತ್ರಾಂಶದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ. ಸದರಿ ತಂತ್ರಾಂಶದ ಬಳಕೆಯನ್ನು ವ್ಯವಸ್ಥಿತ ಜಾರಿಗೊಳಿಸುವ ಸಲುವಾಗಿ ಪೂಜ್ಯ ಮಹಾಪೌರರು ಹಾಗೂ ಮಾನ್ಯ ಆಯುಕ್ತರು ಒಳಗೊಂಡಂತೆ ರಸ್ತೆ ಇತಿಹಾಸ ತಂತ್ರಾಂಶ, ರಸ್ತೆ ಕಡಿತ ಹಾಗೂ ನಿರ್ವಹಣೆ ವ್ಯವಸ್ಥೆ, ಪರಿಷ್ಕರಣೆ ಪ್ರಕ್ರಿಯೆಯನ್ನು ಆಯಾ ವಲಯಕ್ಕೆ ಸಂಬಂಧಪಟ್ಟ ಮುಖ್ಯ ಅಭಿಯಂತರರು/ ಅಧೀಕ್ಷಕ ಅಭಿಯಂತರರು / ಕಾರ್ಯಪಾಲಕ ಅಭಿಯಂತರರು ಹೊರಗುತ್ತಿಗೆ ಆಧಾರದ ಮೇಲೆ ಗಣಕಯಂತ್ರ ನಿರ್ವಾಹಕರುಗಳಿಂದ ಸದರಿ ಪ್ರಕ್ರಿಯೆಯನ್ನು ಎರಡು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲು ಆದೇಶಿಸಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕರಾರು ಒಪ್ಪಂದದ ಪ್ರಕಾರ M/s Cybertech Systems and Software Limited ಸಂಸ್ಥೆಯವರು GIS Support ಅಭಿಯಂತರರು (04 ಸಂಖ್ಯೆ) ಗಳನ್ನು ನೀಡಿದ್ದು ತಂತ್ರಾಂಶದ ನಿರ್ವಹಣೆ ಮತ್ತು ಇತರೆ ತಾಂತ್ರಿಕ ನೆರವಿಗಾಗಿ ನಿಯೋಜಿಸಿರುತ್ತಾರೆ. ಸದರಿ ಅಭಿಯಂತರರುಗಳನ್ನು ಪೂರ್ಣ ಪ್ರಮಾಣದಲ್ಲಿ ಸದುಪಯೋಗಪಡಿಸಿಕೊಂಡು ಎರಡು ತಿಂಗಳ ಅವಧಿಯೊಳಗೆ ಯೋಜನೆಯನ್ನು ಮುಕ್ತಾಯಗೊಳಿಸಲು ಸೂಚಿಸಲಾಗಿದೆ.

ಮುಂದುವರೆದು, ಸದರಿ ವ್ಯವಸ್ಥೆಯನ್ನು ನಿರಂತರವಾಗಿ ಬಳಸಲು ಅನುಷ್ಠಾನಗೊಳಿಸಬೇಕಾಗಿದ್ದು ಪ್ರಸ್ತುತ ಹಾಗೂ ಭವಿಷ್ಯದ ರಸ್ತೆ ಸಂಬಂಧಿತ ಕಾಮಗಾರಿಗಳನ್ನು ಸದರಿ ತಂತ್ರಾಂಶದಲ್ಲಿ ಅಳವಡಿಸಬೇಕಾಗಿರುತ್ತದೆ. ಇನ್ನು ಮುಂದೆ ಎಲ್ಲಾ ಹೊಸ ರಸ್ತೆಗಳು ಹಾಗೂ ಕಾಲುದಾರಿಗಳ ಸಂಬಂಧಿತ ಕಾಮಗಾರಿಗಳು ಸೇರಿದಂತೆ ಸದರಿ ತಂತ್ರಾಂಶದ ವ್ಯವಸ್ಥೆಯನ್ನು ಬಳಸಿ ಅನುಮೋದನೆ ಹಾಗೂ ಹಣ ಪಾವತಿಸುವ ವ್ಯವಸ್ಥೆಯನ್ನು ಅಳವಡಿಸಕೊಳ್ಳಬೇಕಾಗಿರುತ್ತದೆ ಹಾಗೂ Job Code ಅನುಮೋದನೆಗಾಗಿ ಬರುವಂತಹ ಎಲ್ಲಾ ರಸ್ತೆ ಸಂಬಂಧಿತ ಕಾಮಗಾರಿ ಕಡತಗಳನ್ನು ಮುಖ್ಯ ಹಣಕಾಸು ಅಧಿಕಾರಿಯವರು ಸದರಿ ತಂತ್ರಾಂಶದಲ್ಲಿ ಆಡಳಿತಾತ್ಮಕ ಅನುಮೋದನೆ ವಿವರಗಳು ಹಾಗೂ Job Code ಸಂಬಂಧಿತ ವಿವರಗಳನ್ನು ದಾಖಲಿಸಲು ಸೂಚಿಸಿದೆ. Engineering ವಿಭಾಗವು ಸಲ್ಲಿಸುವ ಎಲ್ಲಾ ರಸ್ತೆ ಸಂಬಂಧಿತ ಕಾಮಗಾರಿ ಬಿಲ್ಲ್‌ಗಳನ್ನು GIS based road works software module system ತಂತ್ರಾಂಶದಲ್ಲೆ ಅಪ್ಡೇಟ್ ಮಾಡಿ ಜಿ.ಐ.ಎಸ್ ವ್ಯವಸ್ಥೆ ರಚಿತವಾದ ಪ್ರಮಾಣಪತ್ರಗಳನ್ನು ಪಡೆದು ಬಿಲ್ಲ್‌ಗಳನ್ನು ಪಾವತಿಸಬೇಕಾಗಿರುತ್ತದೆ. ಪಾಲಿಕೆಯ ಹಣಕಾಸು ಮತ್ತು ಲೆಕ್ಕಪತ್ರ ವಿಭಾಗವು ಜಿ.ಐ.ಎಸ್ ವ್ಯವಸ್ಥೆ ರಚಿತವಾದ ಪ್ರಮಾಣಪತ್ರಗಳು ಲಭ್ಯವಿಲ್ಲದ ಕಾಮಗಾರಿಗಳಿಗೆ ಹಣವನ್ನು ಪಾವತಿಸುವಂತಿಲ್ಲ ಹಾಗೂ ಯಾವುದೇ ವಿಚಲನೆ ಕಂಡುಬಂದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು. ಇದನ್ನು ನಿರ್ವಹಿಸಲು ಲೆಕ್ಕಪತ್ರ ವಿಭಾಗವು ಸ್ವೀಕರಿಸುವ ಮೇಲ್ಕಂಡ ಕಾಮಗಾರಿಗಳ ಕಡತಗಳಲ್ಲಿ ಸದರಿ ಪ್ರಮಾಣಪತ್ರವು ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಸೂಚಿಸಿದೆ. ಈ ವ್ಯವಸ್ಥೆಯಿಂದ ತಂತ್ರಾಂಶದ ಫಲಪ್ರದತೆ ವ್ಯವಸ್ಥೆಯು ಸಾಕಷ್ಟು ಉತ್ತಮಗೊಳಿಸುವುದನ್ನು ಖಚಿತಪಡಿಸಿಕೊಳ್ಳಬಹುದಾಗಿರುತ್ತದೆ.

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳು:

1. ಮಾನ್ಯ ಆಯುಕ್ತರ ಅವಗಾಹನೆಗೆ.
2. ಮಾಹಿತಿ ತಂತ್ರಜ್ಞಾನ ಸಲಹೆಗಾರರ ಗಮನಕ್ಕೆ ತರಲಾಗಿದೆ.
3. ಪ್ರಧಾನ ಅಭಿಯಂತರರ ಸೂಕ್ತ ಕ್ರಮಕ್ಕಾಗಿ ಕಳಿಸಲಾಗಿದೆ.
4. ಮುಖ್ಯ ಅಭಿಯಂತರರ (ಓ.ಎಫ್.ಸಿ) ಗಮನಕ್ಕೆ ತರಲಾಗಿದೆ.
5. ಕಾರ್ಯಪಾಲಕ ಅಭಿಯಂತರರು (ಓ.ಎಫ್.ಸಿ) ಗಮನಕ್ಕೆ ತರಲಾಗಿದೆ.
6. ಮುಖ್ಯ ಲೆಕ್ಕಾಧಿಕಾರಿಗಳ ಗಮನಕ್ಕೆ ತರಲಾಗಿದೆ.